O.S.2/2017
P.W.1

**ಸಾಕ್ಷಿದಾರರನ್ನುಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು.**

**ದಿನಾಂಕಃ 12-01-2018.**

ಪಾಟೀ ಸವಾಲು ಶ್ರೀ ಕೆ.ಜೆ.ಡಿ. ಪ್ರತಿವಾದಿ ಪರ **ವಕೀಲರಿಂದ ಃ**

ನಾನು ಪಿ.ಯು.ಸಿ ವರೆಗೆ ವ್ಯಾಸಾಂಗ ಮಾಡಿದ್ದೇನೆ. ನಾನು ಟೈಲರಿಂಗ್ ವೃತ್ತಿ ಹಾಗೂ ವ್ಯವಸಾಯ ಮಾಡುತ್ತಿದ್ದೇನೆ. ಟೈಲರಿಂಗ್ ಮನೆಯಲ್ಲಿ ಮಾಡುತ್ತೇನೆ. ವ್ಯವಸಾಯವನ್ನು ನಮ್ಮ ಊರಾದ ಹಿರೀಸಾವೆ ಮತ್ತಿಗಟ್ಟೆಯಲ್ಲಿ ಮಾಡುತ್ತೇವೆ. ಚನ್ನರಾಯಟಪ್ಪಣದಿಂದ ಮತ್ತಿಗಟ್ಟ ಗ್ರಾಮಕ್ಕೆ ಸುಮಾರು 25 ರಿಂದ 30 ಕಿ.ಮೀ ಅಂತರ ಇದೆ. ನನ್ನ ಗಂಡ ತೆರಿಗೆ ಪಾವತಿದಾರರಾಗಿದ್ದಾರೆ.

2013 ನವಂಬರ್ ತಿಂಗಳಲ್ಲಿ ಪ್ರತಿವಾದಿ 1 ಲಕ್ಷದ 50 ಸಾರ ರೂಪಾಯಿ ಸಾಲ ಕೇಳಿದ್ದು, ನನ್ನ ಬಳಿ ಅಷು ಇಲ್ಲ ಎಂದು ತಿಳಿಸಿದ್ದು ದಿನಾಂಕಃ04.12.2013 ರಂದು 50 ಸಾವಿರವನ್ನು, ದಿನಾಂಕಃ02.01.2014 ರಂದು 80 ಸಾವಿರ ರೂಪಾಯಿಗಳನ್ನು ನೀಡಿರುತ್ತೇನೆ. ಸದರಿ ಹಣವನು ದಿನಾಂಕಃ04.12.2013 ರಂದು 2 ಗಂಟೆ ಸಮಯದಲ್ಲಿ ನೀಡಿರುತ್ತೇನೆ. ಆಗ ಸಾವಿರ ರೂಪಾಯಿ 30 ನೋಟು ಹಾಗೂ 500 ರೂಪಾಯಿಯ 40 ನೋಟುಗಳನ್ನು ನೀಡಿರುತ್ತೇನೆ. ಆ ದಿನ ಬುದವಾರ ಇರಬಹುದು. ದಿನಾಂಕಃ02.01.2014 ರಂದು 80 ಸಾವಿರ ನೀಡಿದ್ದು, ಆ ದಿನ ಗುರುವಾರ ಆಗಿರಬಹುದು. ಆ ದಿನ ಸಾವಿರ ರೂಪಾಯಿಯ 50 ನೋಟು 500 ರೂಪಾಯಿಯ 50 ನೋಟು, 100 ರೂಪಾಯಿಯ 50 ನೋಟು ನೀಡಿರುತ್ತೇನೆ.

ಸದರಿ ಹಣವು ಕೊಬ್ಬರಿ ಮಾರಾಟದಿಂದ ಬಂದಿತ್ತು. ಸದರಿ ಕೊಬ್ಬರಿಯನು ಪದ್ಮಶ್ರಿ ಟ್ರೈಲ ರ್ ರವರಗೆ ಮಾರಾಟ ಮಾಡಿರುತ್ತೇನೆ. ಸದರಿ ಚೀಟಿ ಈಗ ನನ್ನ ಬಳಿ ಲಭ್ಯವಿಲ್ಲದಿರಬಹುದು. 50 ಸಾವಿರ ರೂಪಾಯಿಗಳನ್ನು ನಾನು ಟೈಲರಿಂಗ್ ವೃತ್ತಿ ಹಾಗೂ ಕಾಯಿಗಳನ್ನು ವ್ಯಾಪಾರವನ್ನು ಮಾರಾಟ ಮಾಡಿ ಉಳಿಸಿದ್ದ. ಸದರಿ ಹಣವನ್ನು ಪ್ರತಿವಾದಿ ಪಡೆದಿರುತ್ತಾರೆ.

ಪ್ರತಿವಾದಿಗೆ 50 ಸಾವಿರ ರೂಪಾಯಿ ಕೊಡುವ ಸಮಯದಲ್ಲಿ ಇದ್ದರು. ಸಾಕ್ಷಿದಾರರು ಇದ್ದರು. ಪ್ರತಿವಾದಿ ಛಾಪಾ ಕಾಗದವನ್ನು ಅದೇ ದಿನ ತಂದಿದ್ದರು. ಉಳಿಕೆ ಹಣಹವನ್ನು ಬರೆದು ಕೊಡುವಂತೆ ತಿಳಿಸಿದ್ದೆ. ಸಾಕ್ಷಿದಾರರಾದ ಶಿವಲಿಂಗೇಗೌಡ ಮತ್ತು ನಂಜುಂಡಸ್ವಾಮಿ ಒಂದೇ ಊರಿನವರು ಎಂದರೆ ಸರಿ. ನಾನು ಮತ್ತು ಪುಟ್ಟೇಗೌಡ ರವರು ಒಂದೇ ಊರಿನವರು ಎಂದೆರ ಸರಿ.

ಪ್ರತಿವಾದಿ ನಾನು ನೋಟೀಸು ನೀಡಿದಾಗ ಸದರಿ ಕರಾರಿನ ಜೆರಾಕ್ಸ್ ಪ್ರತಿಯನು ನೀಡುವಂತೆ ಕೇಳಿದ್ದರು ಎಂದರೆ ಸರಿ. ಸದರಿ ದಾಖಲೆಯನ್ನು ಪ್ರತಿವಾದಿಯ ವಕೀಲರಿಗೆ ನೀಡಲಿಲ್ಲ. ಆ ರೀತಿ ಜೆರಾಕ್ಸ್ ನೀಡಲು ತೊಂದರೆ ಇತ್ತಾ ಎಂದರೆ ನನಗೆ ಗೊತ್ತಿಲ್ಲ, ನಾನು ಪ್ರತಿವಾದಿಗೆ ಯಾವುದೆ ಹಣ ನೀಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಹೆಂಡತಿ ಕೆಲಸದಲ್ಲಿ ಇದ್ದಾರೆ ಎಂದರೆ ಸರಿ. ಪ್ರತಿವಾದಿಗೆ ಊರಿನಲ್ಲಿ ತೋಟ ಗದ್ದೆ ಹಾಗೂ ನೀರಾವರಿ ಜಮೀನುಗಳು ಇವೆ ಎಂದರೆ ಸರಿ. ಪ್ರತಿವಾದಿ ಯಾವುದೇ ಸಾಲ ಪಡೆಯದಿದ್ದರೂಸಹ ನಿಶಾನ ಪಿ-1 ರಲ್ಲಿ ಅವರ ಸಹಿಯನ್ನು ಸೃಷಿ ಮಾಡಿದ್ದೇವೆ ಎಂದರೆ ಸರಿಯಲ್ಲ,

O.S.2/2017
P.W.1

ಸದರಿ ಪತ್ರವನ್ನು 01.30 ರಿಂದ 02.30 ರವರಗೆ ಬರೆಯಲಾಯಿತು. ನಿಶಾನೆ ಪಿ-1 ನ್ನು ಪ್ರತಿವಾದಿಯು ಬೆರಳಚ್ಚು ಮಾಡಿಸಿರುತ್ತಾರೆ. ಆ ಸಮಯಕ್ಕೆ ಪುಟ್ಟೇಗೌಡ, ಶಿವಲಿಂಗೇಗೌಡ ನಾನು, ನನ್ನ ಗಂಡ, ಹಾಗೂ ನಂಜುಂಡಸ್ವಾಮಿ ಇದ್ದರು. ನಾನು ಮತ್ತ ಪುಟ್ಟೇಗೌಡ ರವರು ಒಂದೇ ಊರಿನವರಾದ ಕರಾರನ್ನು ಶಿಲವಲಿಂಗೇಗೌಡ ಮತ್ತು ನಂಜುಂಡಸ್ವಾಮಿ ರವರು ಸೇರಿಸಿಕೊಂಡು ನಿಶಾನೆ ಪಿ-1 ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ . ನಿಶಾನೆ ಪಿ-1 ರಲ್ಲಿ ಪ್ರತಿವಾದಿಯ ಸಹಿ ಅಲ್ಲ ಎಂದರೆ ಸರಿಯಲ್.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸ.ಇ.ಎ.ಒ.ಸ.ಮಾ,**

***(ಎಸ್.ಚಿನ್ನಸ್ವಾಮಿ)***
**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಚನ್ನರಾಯಪಟ್ಟಣ**